**ಇಂದು ದಿಃ 22.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಆರೋಪಿತರ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ನಾನು *BBM., M.com., LLB., C.A Intermediates* ಮಾಡಿರುತ್ತೇನೆ. *C.A Intermediates* ಮಾಡಿದವರು *Chartered Accountant* ಎಂದು ಹಾಕಿ ಕೊಳ್ಳಲು ಬರುವುದಿಲ್ಲ. ಎಲ್.ಎಲ್.ಬಿ.ಯಲ್ಲಿ *Taxation* ವಿಷಯ ಇರುತ್ತದೆ ಎಂದರೆ ಸರಿ. ಆಡಿಟ್ ಮಾಡುವಾಗ ಕಡ್ಡಾಯವಾಗಿ *Income, Expenditure* ಮತ್ತು ಬ್ಯಾಲೆನ್ಸ್ ಪರಿಶೀಲನೆ ಮಾಡಬೇಕು ಎಂದರೆ ಸರಿ. ಬ್ಯಾಲೆನ್ಸ್ ಶೀಟ್ ತಯಾರು ಮಾಡಲು ಅಧಿಕೃತ ದಾಖಲೆಗಳು ಬೇಕು ಎಂದರೆ ಸರಿ. ನಾನು ಯಾವತ್ತೂ ಅಧಿಕೃತ ದಾಖಲೆಗಳು ಇಲ್ಲದೇ ಆಡಿಟ್ ಮಾಡಿರುವುದಿಲ್ಲ.

ನಿ.ಪಿ.45 ಅನ್ನು ನಾನು ದಿಃ 28.04.2014 ರಂದು ನೀಡಿರುವ ವರದಿ ಎಂದರೆ ಸರಿ . ನಿ.ಪಿ. 45 ರ 2 ನೇ ಪುಟದ 2 ನೇ ಪ್ಯಾರಾದಲ್ಲಿ *Books of accounts, receipts books, voucher/bills, bank account not available* ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ಪ್ಯಾರಾ 7 ರಲ್ಲಿ 1995-96 ರಿಂದ 2010 ರ ವರೆಗೆ *short collections* ಎಂದು ತೋರಿಸಿದ್ದೇನೆ ಎಂದರೆ ಸರಿ. *short collections* ತೋರಿಸಲು ಯಾವುದೇ ಅಧಿಕೃತ ದಾಖಲೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮ್ಯಾನೇಜ್ ಮೆಂಟ್ ರವರು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮಾಹಿತಿಯನ್ನು ಗೋವಿಂದಯ್ಯ ರವರು ಕೊಟ್ಟಿರುವುದಿಲ್ಲ. ಮಾಹಿತಿಯನ್ನು ನಿಖರವಾಗಿ ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಶಾಲೆಯ ಮುಖ್ಯೋಪಧ್ಯಾಯರು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ವರದಿ ನಿ.ಪಿ.45 ಮುಖ್ಯೋಪಧ್ಯಾಯರು ಕೊಟ್ಟ ಮಾಹಿತಿಯ ಮೇರೆಗೆ ಮಾಡಿರುತ್ತೇನೆ. ಮುಖ್ಯೋಪದ್ಯಾಯರಿಗೆ ಅಧಿಕೃತ ದಾಖಲೆಗಳನ್ನು ಕೊಡಿ ಎಂದು ನಾನು ಕೇಳಿರುವುದಿಲ್ಲ.

ನಿ.ಪಿ.45 ನಾನು ಮುಖ್ಯೋಪಧ್ಯಾಯರ ಅಪೇಕ್ಷೆಯಂತೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಬೈಲುಕುಪ್ಪ ಪೊಲೀಸರು ಕೇಳಿದ ಮೇರೆಗೆ ಮ್ಯಾನೇಜ್ ಮೆಂಟ್ ನವರು ನನಗೆ ವಿನಂತಿ ಪತ್ರ ಕೊಟ್ಟಿದ್ದರು ಆ ಕಾರಣ ನಿ.ಪಿ.45 ವರದಿ ಕೊಟ್ಟಿರುತ್ತೇನೆ.

ಪೊಲೀಸರು ನನಗೆ ನೇರವಾಗಿ ವಿನಂತಿ ಪತ್ರ ಕೊಟ್ಟಿಲ್ಲ. ಮ್ಯಾನೇಜ್ ಮೆಂಟ್ ನನಗೆ ಕೊಟ್ಟ ವಿನಂತಿ ಪತ್ರದ ಬಗ್ಗೆ ದಾಖಲೆ ಇದೆ. ವಿನಂತಿ ಪತ್ರವನ್ನು ಎಪ್ರಿಲ್ 2014 ರಂದು ಕೊಟ್ಟಿದ್ದಾರೆ ತಾರೀಖು ನೆನಪಿಲ್ಲ. ನನಗೆ ಕೊಟ್ಟ ವಿನಂತಿ ಪತ್ರ ನನ್ನ ಬಳಿ ಇದೆ. ಸದರಿ ವಿನಂತಿ ಪತ್ರಕ್ಕೆ ಟ್ರಸ್ಟ್ ನ ಕಾರ್ಯದರ್ಶಿಯವರು ಸಹಿ ಮಾಡಿರುತ್ತಾರೆ. ಕಾರ್ಯದರ್ಶಿಯ ಹೆಸರು ಗೋವಿಂದಯ್ಯ. ಆ ಸಮಯದಲ್ಲಿ ಮ್ಯಾನೇಜಿಂಗ್ ಟ್ರಸ್ಟಿ ಹುದ್ದೆ ಇರಲಿಲ್ಲ. 1995 ರಿಂದ 2009 ರ ವರೆಗೆ ಗೋವಿಂದಯ್ಯ ರವರು ಮ್ಯಾನೇಜಿಂಗ್ ಟ್ರಸ್ಟಿ ಆಗಿದ್ದರು ಎಂದರೆ ಸರಿ. ಮ್ಯಾನೇಜಿಂಟ್ ಟ್ರಸ್ಟಿ ಹುದ್ದೆ ತೆಗೆದು ಹಾಕಿರುವ ಬಗ್ಗೆ ತಿದ್ದುಪಡಿ ಟ್ರಸ್ಟ್ ಡೀಡ್ ನೋಡಿದ್ದೇನೆ. ತಿದ್ದುಪಡಿ ಟ್ರಸ್ಟ್ ಡೀಡ್ ಅನ್ನು ಯಾವಾಗ ಮಾಡಿದ್ದಾರೆ ಎಂದು ನೆನಪಿಲ್ಲ. ಅದನ್ನು 2012 ರಿಂದ 2014 ರ ನಡುವೆ ಮಾಡಿರುತ್ತಾರೆ. ತಿದ್ದುಪಡಿ ಟ್ರಸ್ಟ್ ಡೀಡ್ ಪ್ರಕಾರ ಕಾರ್ಯದರ್ಶಿ ಹುದ್ದೆ ಗೌರವಾನ್ವಿತ ಹುದ್ದೆ ಆಗಿತ್ತು. ಹಿಂದಿನ ಟ್ರಸ್ಟ್ ಡೀಡ್ ನಲ್ಲಿ ಮ್ಯಾನೇಂಜಿಂಗ್ ಟ್ರಸ್ಟಿಯ *Rules and responsibilities* ಇರಲಿಲ್ಲ. ಟ್ರಸ್ಟ್ ಡೀಡ್ ಕಡ್ಡಾಯವಾಗಿ ನೊಂದಣಿ ಯಾಗಬೇಕು. ಮ್ಯಾನೇಂಜಿಂಗ್ ಟ್ರಸ್ಟಿಯ *Rules and responsibilities* ಟ್ರಸ್ಟ್ ಡೀಡ್ ನಲ್ಲಿ ನಮೂದು ಮಾಡದಿದ್ದರೇ ಟ್ರಸ್ಟ್ ಡೀಡ್ ನೊಂದಣಿಯಾಗುವುದಿಲ್ಲ ಎಂದರೆ ಸರಿಯಲ್ಲ.

ಮೊದಲ ಟ್ರಸ್ಟ್ ಡೀಡ್ 1986 ರಲ್ಲಿ ನೊಂದಣಿಯಾಗಿರುತ್ತದೆ. ಸದರಿ ಟ್ರಸ್ಟ್ ಡೀಡ್ ನಲ್ಲಿ *Income, Expenditure* ಮತ್ತು ಬಾಲೆನ್ಸ್ ಆಡಿಟ್ ಮಾಡಿಸಬೇಕು ಎಂದು ನಮೂದು ಇತ್ತು. ಸದರಿ ಟ್ರಸ್ಟ್ ಡೀಡ್ ನಲ್ಲಿ ಮ್ಯಾನೇಂಜಗ್ ಟ್ರಸ್ಟಿಯನ್ನು ನೇಮಕ ಮಾಡುವ ಬಗ್ಗೆ ನಮೂದು ಇರುತ್ತದೆ.

ಮ್ಯಾನೇಜಿಂಗ್ ಟ್ರಸ್ಟಿಯು ಬ್ಯಾಂಕ್ ಖಾತೆ ತೆರೆಯಲು ಅಧಿಕಾರ ಕೊಟ್ಟಿರಲಿಲ್ಲ. ಬ್ಯಾಂಕ್ ಖಾತೆ ತೆರೆಯಲು ಎಲ್ಲಾ ಟ್ರಸ್ಟಿಗಳಿಗೂ ಅಧಿಕಾರ ಕೊಡಲಾಗಿತ್ತು.

ಮಿಳಿಂದ ವಿಧ್ಯಾಸಂಸ್ಥೆಯ ಬ್ಯಾಂಕ್ ಖಾತೆ ಬ್ಯಾಂಕ್ ಆಫ್ ಮಹಾರಾಷ್ಟ್ರ ದಲ್ಲಿ ಇತ್ತು ಎಂದರೆ ಸರಿ. ಸದರಿ ಖಾತೆಯಲ್ಲಿ ಗೋವಿಂದಯ್ಯ ಆಪರೇಟ್ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಸಂಸ್ಥೆಯ ಪರವಾಗಿ ಯಾರು ಬ್ಯಾಂಕ್ ಖಾತೆಯನ್ನು ಅಪರೇಟ್ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ದಾಖಲೆ ಪಡೆದುಕೊಂಡಿಲ್ಲ. ಟ್ರಸ್ಟ್ ಹಣವನ್ನು ಯಾವ ಟ್ರಸ್ಟಿಯೂ ಇಟ್ಟುಕೊಳ್ಳುವ ಹಾಗೆ ಇರುವುದಿಲ್ಲ. ಏನೇ ವ್ಯವಹಾರ ಆದರೂ ಬ್ಯಾಂಕ್ ಖಾತೆಯ ಮೂಲಕ ವ್ಯವಹರಿಸಬೇಕಾಗಿತ್ತು ಎಂದರೆ ಸರಿ. ಬ್ಯಾಂಕ್ ಖಾತೆಗಳಲ್ಲಿ ಜಮಾ ಆದ ಹಣ ಮತ್ತು ತೆಗೆದ ಹಣ ಮತ್ತು ಬ್ಯಾಲೆನ್ಸ್ ಹಣವನ್ನು ಪರಿಶೀಲನೆ ಮಾಡಿಲ್ಲ.

ನಾನು ಆಡಿಟ್ ಮಾಡುವಾಗ ದೊಡ್ಡಣ್ಣರವರು ಹಣಕಾಸಿನ ವ್ಯವಹಾರವನ್ನು ನಿರ್ವಹಿಸ ಬೇಕು ಎಂದು ಮಾಡಿದ ಬಗ್ಗೆ ಯಾವುದೇ ದಾಖಲೆ ನೋಡಿಲ್ಲ. ಗೋವಿಂದಯ್ಯ ರವರ ಜೊತೆ ದೊಡ್ಡಣ್ಣರವರು ಆಡಿಟ್ ಮಾಡಿಸಲು ಬಂದಿದ್ದರು ಎಂದು ತೋರಿಸಲು ಯಾವುದಾದರೂ ದಾಖಲೆ ಇದಿಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಎಲ್ಲಾ ಮಾಹಿತಿಯನ್ನು ಮತ್ತು ದಾಖಲೆಯನ್ನು ದೊಡ್ಡಣ್ಣರವರೇ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದೊಡ್ಡಣ್ಣರವರು ದಾಖಲೆಗಳ ಪಟ್ಟಿ ಮಾಡಿ ಅದಕ್ಕೆ ಸಹಿ ಮಾಡಿ ದಾಖಲೆಗಳನ್ನು ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ದಾಖಲೆ ಕೊಟ್ಟಿದ್ದಾರೆ ಆದರೆ ದಾಖಲೆಗಳ ಪಟ್ಟಿ ಮಾಡಿ ಸಹಿ ಮಾಡಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ತಾರೀಖಿಗೆ ದೊಡ್ಡಣ್ಣರವರು ಗೋವಿಂದಯ್ಯರವರ ಜೊತೆ ಬಂದು ನನಗೆ ದಾಖಲೆಗಳನ್ನು ಕೊಟ್ಟಿದ್ದಾರೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ತಾರೀಖು ನೆನಪಿಲ್ಲ ಎಂದು ನುಡಿಯುತ್ತಾರೆ.

ದೊಡ್ಡಣ್ಣರವರಿಗೆ ದಾಖಲೆಗಳನ್ನು ವಾಪಸ್ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಬ್ಯಾಂಕ್ ದಾಖಲೆಗಳು ಇಲ್ಲದೇ ಇದ್ದರೂ ಆಡಿಟ್‌ಅನ್ನು ಮಾಡಿಕೊಡಲು ಮ್ಯಾನೇಜ್ ಮೆಂಟ್ ಕೋರಿಕೆಯ

ಮೇರೆಗೆ ಮಾಡಿರುತ್ತೇನೆ. ನನ್ನ 36 ವರ್ಷದ ಅವಧಿಯಲ್ಲಿ ದಾಖಲೆಗಳಿಲ್ಲದೇ ಯಾವುದೇ ಆಡಿಟಿಂಗ್ ಮಾಡಿರುವುದಿಲ್ಲ. ಬ್ಯಾಂಕ್ ದಾಖಲೆಗಳು ಇಲ್ಲದೇ ಆಡಿಟ್ ಮಾಡಲು ಆಗುವುದಿಲ್ಲ ಎಂದು ಮ್ಯಾನೇಜ್ ಮೆಂಟ್ ಗೆ ತಿಳಿಸಿದ್ದೇನೆ. ಬ್ಯಾಂಕ್ ದಾಖಲೆಗಳು ಇಲ್ಲದೇ ಇದ್ದಾಗ ಆಡಿಟ್ ಶೇ. 100 ರಷ್ಟು ಸರಿ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿ ಇರುವುದಿಲ್ಲ ಆದರೆ ನಾನು *compiled statement* ಅಧಾರದ ಮೇಲೆ ಆಡಿಟ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ. 45 ರ 7 ನೇ ಪ್ಯಾರಾದಲ್ಲಿ ನಮೂದು ಮಾಡಿರುವ *short collections* ನಮ್ಮ ಪ್ರಕಾರ ಶೇ. 100 ರಷ್ಟು ಸರಿ ಇಲ್ಲ ಎಂದರೆ ಸರಿ.

1995 ರಿಂದ 2010 ನೇ ಸಾಲಿನ ವರೆಗೆ ನಾನು ಪ್ರತಿ ವರ್ಷ ಪ್ರತ್ಯೇಕವಾಗಿ ಆಡಿಟ್ ವರದಿ ಕೊಟ್ಟಿದ್ದೇನೆ. ಸದರಿ ವರದಿಗಳಲ್ಲಿ ದೊಡ್ಡಣ್ಣ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಮೂದು ಮಾಡಿಲ್ಲ. ಆರೋಪಿ ಯಾವುದೇ ಹಣಕಾಸಿನ ವ್ಯವಹಾರ ಮಾಡದೇ ಇರುವ ಕಾರಣ ಮತ್ತು ಯಾವುದೇ ದುರುಪಯೋಗ ಕಂಡುಬಂದಿಲ್ಲದ ಕಾರಣ ನಾನು ಅ ರೀತಿ ವರದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ದಾಖಲೆಗಳಲ್ಲಿಯೂ ಆರೋಪಿಯು ಟ್ರಸ್ಟಿನ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಕಂಡು ಬಂದಿಲ್ಲ.

ನಿ.ಪಿ.45 ರ 4 ನೇ ಪುಟದಲ್ಲಿ ಫೀ ಕಲೆಕ್ಷನ್ ಆದ ಬಗ್ಗೆ ನಮೂದಿಸಿದ್ದೇನೆ. ಫೀ ಕಲೆಕ್ಷನ್ ಅದ ಬಗ್ಗೆ ದಾಖಲೆ ತೆಗೆದುಕೊಂಡಿಲ್ಲ. ಸಾಕ್ಷಿಯು ಫೀ ಕಲೆಕ್ಷನ್ ಬಗ್ಗೆ ವರದಿಯನ್ನು ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ 1995 ರಿಂದ 1997 ರಲ್ಲಿ ಫೀ ಕಲೆಕ್ಷನ್ ಆಗಿದೆ ಎಂದು ಮಾಹಿತಿಯನ್ನು ಮ್ಯಾನೇಜ್ಮೆಂಟ್ ಕೊಟ್ಟಿರುತ್ತಾರೆ. ಆದರೆ ಮಾಹಿತಿ ಕೊಟ್ಟ ವ್ಯಕ್ತಿಯ ಹೆಸರು ನೆನಪಿಲ್ಲ. ಮಾಹಿತಿಯನ್ನು ಯಾವ ತಾರೀಖಿನಂದು ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಎಷ್ಟು ಫೀ ಕಲೆಕ್ಷನ್ ಆಗಿತ್ತು ಎಂದು ಹೇಳಿದ್ದಾರೆ ನೆನಪಿಲ್ಲ. ಆದರೆ ಅದು ನನ್ನ ವರದಿಯಲ್ಲಿದೆ. 1995-96 ಮತ್ತು 1996-97 ನೇ ಸಾಲಿನ ಆಡಿಟಿಂಗ್ ವರದಿಯಲ್ಲಿ ಮೇಲೆ ಹೇಳಿದ ಫೀ ಕಲೆಕ್ಷನ್ ಬಗ್ಗೆ ವರದಿ ಮಾಡಿಲ್ಲ. ಸಾಕ್ಷಿಯು ನನಗೆ ಎಷ್ಟು ಮಾಹಿತಿ

ಕೊಟ್ಟಿದ್ದರೋ ಅಷ್ಟರ ಬಗ್ಗೆ ಆಡಿಟಿಂಗ್ ಮಾಡಿರುತ್ತೇನೆ. ನಿ.ಪಿ.45 ರ 4 ನೇ ಪುಟದಲ್ಲಿ ಫೀ ಕಲೆಕ್ಷನ್ ವಿಷಯವನ್ನು ನನಗೆ 2014 ರಲ್ಲಿ ಕೊಟ್ಟ ಮಾಹಿತಿಯ ಆಧಾರದ ಮೇರೆಗೆ ಬರೆದಿರುತ್ತೇನೆ. ಆ ರೀತಿ ವರದಿ ಕೊಟ್ಟಿರುವುದು ನನ್ನ ಕಾರ್ಯವ್ಯಾಪ್ತಿಗೆ ಮೀರಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಗೋವಿಂದಯ್ಯರವರ ಅಪೇಕ್ಷೆಯ ಮೇರೆಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

1994-95 ರಿಂದ 2010 ರ ವರೆಗೆ ನಾನು ಆಡಿಟ್ ಮಾಡುವಾಗ ಯಾರೂ ಬಂದು ಆರೋಪಿ ನಮ್ಮ ಬಳಿ ಹಣ ಪಡೆದುಕೊಂಡು ರಸೀದಿ ಕೊಟ್ಟಿಲ್ಲ ಎಂದು ದೂರು ವಗೈರೆ ಕೊಟ್ಟಿಲ್ಲ. ಆಡಿಟ್ ಮಾಡುವಾಗ ಆರೋಪಿ ಹಣ ಪಡೆದು ರಸೀದಿ ಕೊಟ್ಟಿಲ್ಲ ಎನ್ನುವಂತಹ ಯಾವುದೇ ದೂರು ಕಂಡು ಬಂದಿಲ್ಲ. ಆರೋಪಿ ಗೋವಿಂದಯ್ಯರವರ ಜೊತೆ ಬಂದು ದಾಖಲೆಗಳನ್ನು ಕೊಟ್ಟು ಮತ್ತು ಮಾಹಿತಿಯನ್ನು ಕೊಟ್ಟು ಆಡಿಟ್ ಮಾಡಲು ಕೇಳಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.45 ರ 4 ನೇ ಪುಟದಲ್ಲಿ ಟ್ರಸ್ಟ್ ನಲ್ಲಿ *Standard accounting System based on authenticated documents is not maintained* ಎಂದು ವರದಿ ಮಾಡಿರುತ್ತೇನೆ.

ಟ್ರಸ್ಟಿನಲ್ಲಿ ಲೆಕ್ಕ ಪತ್ರಗಳನ್ನು ನೋಡುಕೊಳ್ಳುವಂತ ಯಾರಾದರೂ ವ್ಯಕ್ತಿಯನ್ನು ನೇಮಕ ಮಾಡಿದ ಬಗ್ಗೆ ದಾಖಲೆ ನೋಡಿಲ್ಲ. ನನಗೆ ಟ್ರಸ್ಟ್ ನ ಹಣಕಾಸಿನ ವ್ಯವಹಾರ ಮತ್ತು ಲೆಕ್ಕ ಪತ್ರಗಳಲ್ಲಿ ಯಾರ ಜವಾಬ್ದಾರಿ ಇತ್ತು ಮತ್ತು ಅದನ್ನು ಯಾರು ನೋಡಿಕೊಳ್ಳುತ್ತಿದ್ದರು ಎನ್ನುವುದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2006 ರ ನಂತರ ಯಾವುದೇ ಹಣ ಪಾವತಿ ಮಾಡಲು ಪ್ರಸ್ತಾವನೆ ಮಾಡಬೇಕಾಗುತ್ತದೆ ಅದಕ್ಕೆ ಆರೋಪಿಯು ಸಮ್ಮಿತಿಸುತ್ತಾರೆ. ಆ ರೀತಿ ಆರೋಪಿ ಸಮ್ಮಿತಿಸಿದ ಹಣ ಟ್ರಸ್ಟ್ ನ ಬ್ಯಾಂಕಿನ ಖಾತೆಯಿಂದ ಪಾವತಿಸಲಾಗುತ್ತಿತ್ತು. ಟ್ರಸ್ಟ್ ನ ಬ್ಯಾಂಕ್ ಖಾತೆಯನ್ನು ಯಾರು ಆಪರೇಟ್ ಮಾಡುತ್ತಿದ್ದರು ಎಂದು ನಾನು ನೋಡಿಲ್ಲ.

ನಿ.ಪಿ. 12 ರ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಟ್ರಸ್ಟ್ ಖಾತೆಯನ್ನು ಗೋವಿಂದಯ್ಯ , ಮರಿ ಸ್ವಾಮಿ ಮತ್ತು ಬೂತಯ್ಯ ರವರು ನೋಡಿಕೊಳುತ್ತಾರೆ ಮತ್ತು ನಿ.ಪಿ.13 ರಲ್ಲಿ ಗೋವಿಂದಯ್ಯ ರವರು ನೋಡಿ ಕೊಳ್ಳುತ್ತಾರೆ ಎಂದು ನಮೂದು ಇರುತ್ತದೆ. ನಿ.ಪಿ. 12 ಮತ್ತು 13 ರ ಪ್ರಕಾರ ಟ್ರಸ್ಟಿನ ಹಣ ಕೊಡಬೇಕಾದರೆ ಸದರಿ ದಾಖಲೆಗಳಲ್ಲಿ ನಮೂದು ಇರುವ 3 ಜನ ವ್ಯಕ್ತಿಗಳೇ ನಿರ್ದಾರ ಮಾಡುತ್ತಾರೆ ಎಂದರೆ ಸರಿ. ಆರೋಪಿ ಹಣ ಕೊಡಲು ಮಾಡಿದ ರೆಕ್ಮೆಂಡ್ ಅನ್ನು ಒಪ್ಪಿಕೊಳ್ಳಲೇ ಬೇಕು ಎಂದು ಯಾವುದೇ ಕಂಡೀಶನ್ ಇರುವುದಿಲ್ಲ. ಆರೋಪಿ ಹಲವಾರು ಬಾರಿ ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ಅವರ ಕೈಯಿಂದ ಹಣ ಹಾಕಿ ತಂದು ಕೊಡುತ್ತಿದ್ದರು ಎಂದರೆ ಗೊತ್ತಿಲ್ಲ. ನಿ.ಪಿ.45ರ 6 ನೇ ಪುಟದ ಪ್ಯಾರಾ 8 (ಎ) ನಲ್ಲಿ ನಮೂದಿಸಿರುವ ವಿಷಯಕ್ಕೆ ಸಂಬಂಧ ಪಟ್ಟಂತೆ ಪೂರಕ ದಾಖಲೆಗಳನ್ನು ನೋಡಿದ್ದೇನೆ. ಶಿಕ್ಷಕರ ಕಡೆಯಿಂದ 5.67 ಲಕ್ಷ ಹಣವನ್ನು ತೆಗೆದುಕೊಂಡ ಬಗ್ಗೆ ದಾಖಲೆ ನೋಡಿಲ್ಲ. ಸಾಕ್ಷಿಯು ಅದರ ಮಾಹಿತಿಯನ್ನು ಆರೋಪಿಯೇ ಕೊಟ್ಟಿದ್ದಾರೆ. ಆ ರೀತಿ ಮಾಹಿತಿಯನ್ನು ಆರೋಪಿಯು ಬರವಣಿಗೆಯಲ್ಲಿ ಕೊಟ್ಟಿಲ್ಲ.

ನಿ.ಪಿ.6 ರ 67 ನೇ ಪುಟದಲ್ಲಿ ದೇಣಿಗೆ ಮೊತ್ತ 1.75 ಲಕ್ಷ ತೋರಿಸಲಾಗಿದೆ ಎಂದರೆ ಸರಿ. ಸದರಿ ಹಣ ನಿಮ್ಮ ಆಡಿಟ್ ರಿಪೊರ್ಟ್‌ನಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ. 12 ರಲ್ಲಿ ದಿಃ 22.06.2006 ರಂದು ರೂ. 1,68,756/- ಹಣ ಸಿ.ಎಲ್.ಜಿ. ಆಟೋ ಹೌಸ್ ಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ ಹಣ 2006-07 ನೇ ಸಾಲಿನ ಆಡಿಟ್ ವರದಿಯಲ್ಲಿ ಸೇರಿದೆ. 2006-07 ನೇ ಸಾಲಿನ ಆಡಿಟ್ ವರದಿಯಲ್ಲಿ ರೂ. 1,68,756/- ತೋರಿಸಿಲ್ಲ ಎಂದರೆ ಸಾಕ್ಷಿಯು ಸದರಿ ಹಣವನ್ನು ವ್ಯಾನ್ ಖರೀದಿಯ ಹಣವಾದ ರೂ.6,72,266/- ರಲ್ಲಿ ಸೇರಿಕೊಂಡಿದೆ ಎನ್ನುತ್ತಾರೆ. ವ್ಯಾನ್ ಖರೀದಿ ಮಾಡಿದ ವ್ಯವಹಾರದ ದಾಖಲೆಗಳಲ್ಲಿ ಆರೋಪಿ ಹಣ ತೆಗೆದುಕೊಂಡ ಬಗ್ಗೆ ಮತ್ತು ಕೊಟ್ಟ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ.

ನಿ.ಪಿ.45 ರ 6 ನೇ ಪುಟದ 8(ಎ) ಪ್ಯಾರಾದಲ್ಲಿ ಆರೋಪಿಯ ಬಗ್ಗೆ ಗಮನಿಸಿರುವ ವಿಷಯದ ಬಗ್ಗೆ ಯಾವುದೇ ಪೂರಕ ದಾಖಲೆಗಳು ಇಲ್ಲ ಎಂದರೆ ಸರಿ. 1994-95 ರಿಂದ 2009 ರ ಸಾಲಿನ ವರೆಗೆ ಟಿಬೇಟಿಯನ್ ಮೊನಾಸ್ಟ್ರೀ ರವರು ನಾನು ಆಡಿಟ್ ಮಾಡುವ ಕಾಲದಲ್ಲಿ ಬಂದು ಆರೋಪಿಗೆ ಹಣ ಕೊಟ್ಟಿದ್ದೇವೆ ಎಂದು ಯಾವುದೇ ದೂರು ಮಾಡಿಲ್ಲ. ಟಿಬೇಟಿಯನ್ ಮೊನಾಸ್ಟ್ರೀ ರವರ ಕಡೆಯವರಿಂದ ಹಣ ಪಡೆದುಕೊಂಡಿದ್ದೇನೆ ಎಂದು ಆರೋಪಿ ಬರೆದುಕೊಟ್ಟಿದ್ದಾರೆ ಆದರೆ ಅದಕ್ಕೆ ಸಹಿ ಮಾಡಿಲ್ಲ. ಅದರ ಬಗ್ಗೆ ನಿ.ಪಿ.5 ರಲ್ಲಿ ಆರೋಪಿ ಬರೆದುಕೊಟ್ಟ ಮಾಹಿತಿ ಇರುತ್ತದೆ. ನಿ.ಪಿ.5 ರಲ್ಲಿ ಆರೋಪಿಯ ಸಹಿ ಇರುವುದಿಲ್ಲ. ಟಿಬೇಟಿಯನ್ ಮೊನಾಸ್ಟ್ರೀ ರವರ ಕಡೆಯಿಂದ ಆರೋಪಿಯು ಎಷ್ಟು ಹಣ ಪಡೆದುಕೊಂಡಿದ್ದರು ಎಂಬ ಬಗ್ಗೆ ಆಡಿಟ್ ವರದಿಯನ್ನು ನೋಡಿ ಹೇಳ ಬಹುದು.

ನಿ.ಪಿ.45 ರ 6 ನೇ ಪುಟದ ಪ್ಯಾರಾ 8(ಸಿ} ಟ್ರಸ್ಟಿ ಗಳು ಕೊಟ್ಟ ಮಾಹಿತಿಯ ಆಧಾರದ ಮೇಲೆ ಬರೆದಿದ್ದೇನೆ ಅದರ ಬಗ್ಗೆ ದಾಖಲೆ ಇಲ್ಲ. ಪ್ಯಾರಾ 8(ಡಿ) ಆರೋಪಿ ಕೊಟ್ಟ ಮಾಹಿತಿಯ ಮೇರೆಗೆ ಬರೆದಿರುತ್ತೇನೆ. ಅದರ ಬಗ್ಗೆ ದಾಖಲೆ ನಿ.ಪಿ.5 ರಲ್ಲಿ ಇರುತ್ತದೆ. ಅದರಲ್ಲಿರುವ ದಾಖಲೆಗೆ ಆರೋಪಿಯ ಸಹಿ ಇಲ್ಲ ಎಂದರೆ ಸರಿ. ನಿ.ಪಿ. 12 ರಲ್ಲಿ ಸೆಲ್ಫ್ ಡ್ರಾ ಎಂದು ಒಟ್ಟು 88 ಸಾವಿರ ಡ್ರಾ ಆಗಿದೆ. ನಿ.ಪಿ.45 ರ 6 ನೇ ಪುಟದ ಪ್ಯಾರಾ 8(ಇ) ನಲ್ಲಿ ತೋರಿಸಿರುವ ಅಂಶಗಳು ಟ್ರಸ್ಟ್ ಖಾತೆಯಿಂದ ಸೆಲ್ಫ್ ಡ್ರಾ ಮಾಡಿ ಹಣ ತೆಗೆದುಕೊಂಡ ಕಾರಣ ಖಾತೆಯಲ್ಲಿ ಹಣ ಇಲ್ಲದೇ ಚೆಕ್ ವಾಪಸ್ ಬಂದಿರುತ್ತವೆ ಎಂದರೆ ಸರಿಯಲ್ಲ. ಸೆಲ್ಫ್ ಡ್ರಾ ಹಣ ಯಾವ ಕಾರಣಕ್ಕೆ ಆಗಿದೆ ಎಂಬುದು ನನ್ನ ಆಡಿಟ್ ರಪೋರ್ಟ್ ನಲ್ಲಿ ನಮೂದು ಮಾಡಿಲ್ಲ. ನಾನು ಆಡಿಟ್ ಮಾಡುವಾಗ ಟ್ರಸ್ಟ್ ಖಾತೆಯ ಹಣವನ್ನು ಸೆಲ್ಫ್ ಡ್ರಾ ಆದ ಬಗ್ಗೆ ಆಡಿಟ್ ವರದಿಯಲ್ಲಿ ತಿಳಿಸಲೇ ಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬುಕ್ಸ್ ಅಫ್ ಅಕೌಂಟ್ಸ್ ಇಲ್ಲದೇ ಇದ್ದ ಕಾರಣ ಅದನ್ನು ತಿಳಿಸಿಲ್ಲ ಎಂದು ನುಡಿಯುತ್ತಾರೆ.

ಸೆಲ್ಫ್ ಡ್ರಾ ಹಣದ ಬಗ್ಗೆ ಗೋವಿಂದಯ್ಯ , ಮರಿಸ್ವಾಮಿ , ಬೂತಯ್ಯ ರವರ ಕಡೆಯಿಂದ ಮಾಹಿತಿ ಪಡೆದುಕೊಂಡಿಲ್ಲ. ಮಾಹಿತಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**